Rotary

# JASMINE

ಜಾಸ್ಮಿನ್

जास्मिन


WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986





**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President

Volume 39 | Issue - 23 | 05th December 2024

## ಕ್ಲಬಿಗೆ ಅಸಿಸ್ಟೆಂಟ್ ಗವರ್ನರ್ ಭೇಟಿ.

Time : 7.00 p.m.
Venue : Hotel Shivaprasad Grand, Kundapura



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

39th year of Service and Fellowship

We meet every Thursday at 7-30 p.m. at Sarojini Madhusoodhan D. Kushe Rotary South Hall, Kundapura

## ಸಂಪಾದಕೀಯ.... :



ನಮಸ್ಕಾರ ಸ್ನೇಹಿತರೇ,

"ಸರ್ವ ಏವ ರೋಗಂ ಸುತರಂ ಉದರಾಣಿ ಚ"

ಎಂಬ ಆಯುರ್ವೇದ ಉಕ್ತಿಯಂತೆ ಎಲ್ಲಾ ಖಾಯಿಲೆಗಳಿಗೆ ಮೂಲವೇ ಹೊಟ್ಟೆ ಅಥವಾ ಜೀರ್ಣಾಂಗ ವ್ಯೂಹ. ಇದರ ಸರಿಯಾದ ಸಮತೋಲನ ಕಾಪಾಡಿಕೊಂಡರೆ ಹಲವಾರು ಖಾಯಿಲೆಗಳಿಂದ ದೂರವಿರಬಹುದು. ಸರಿಯಾದ ಜೀವನ ಕ್ರಮ, ಆಹಾರ ಪದ್ಧತಿಯ ಪಾಲನೆಯಿಂದ ಆರೋಗ್ಯವಾಗಿರಲು ಸಾಧ್ಯ. ರೋಗ ತಡೆಗಟ್ಟುವುದು ಮತ್ತು ಅದರ ಸಮರ್ಥ ಚಿಕಿತ್ಸೆ ಜೀವನಮಟ್ಟವನ್ನು ಸುಧಾರಿಸುತ್ತದೆ. ಇದಕ್ಕಾಗಿ ಉತ್ತಮ ಆಹಾರ, ವ್ಯಾಯಾಮ, ಸ್ವಚ್ಛತೆ, ಚಿಕಿತ್ಸೆ ಹಾಗೂ ಮಾನಸಿಕ ಸ್ಥೈರ್ಯದ ಅಗತ್ಯವಿದೆ. ರೋಗ ತಡೆಗಟ್ಟಲು ಕೆಲವು ಮೂಲಭೂತ ಕ್ರಮ, ಅಭ್ಯಾಸಗಳನ್ನು ಅನುಸರಿಸಬೇಕು.

**ರೋಗ ತಡೆಗಟ್ಟುವುದು :**

**ಸ್ವಚ್ಛತೆಯ ಪಾಲನೆ :** ದೈಹಿಕ, ಮಾನಸಿಕ ಸ್ವಚ್ಛತೆ, ಆಹಾರವನ್ನು ಸ್ವಚ್ಛವಾಗಿಡುವುದು. ಪರಿಸರದ ಸ್ವಚ್ಛತೆ.

**ವ್ಯಾಯಾಮ, ನಡಿಗೆ :** ದೈಹಿಕ ಸಾಮರ್ಥ್ಯದ ಮಟ್ಟದಲ್ಲಿ ವ್ಯಾಯಾಮ ಮಾಡುವುದು ಹೃದಯವನ್ನು ಆರೋಗ್ಯವಾಗಿಡುತ್ತದೆ.

**ಸಮತೂಕದ ಆಹಾರ :** ಹಣ್ಣುಗಳು, ತರಕಾರಿಗಳು, ಸಮತೋಲನದ ಸೇವನೆ. ಜಂಕ್‌ಫುಡ್‌ಗಳಿಂದ ದೂರವಿರುವುದು.

**ಹೆಚ್ಚು ನೀರು ಕುಡಿಯುವುದು :** ದೇಹವನ್ನು ನಿರ್ಜಲೀಕರಣದಿಂದ ರಕ್ಷಿಸಿ, ಕಶ್ಮಲವನ್ನು ದೇಹದಿಂದ ಹೊರಹಾಕಲು ಸಹಕಾರಿ

**ಯೋಗ ಪ್ರಾಣಾಯಾಮ :** ಮಾನಸಿಕ ಹಾಗೂ ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಕಾರಿ ಅದರೊಂದಿಗೆ ರೋಗ ನಿರೋಧಕ ಲಸಿಕೆ–ಚುಚ್ಚುಮದ್ದುಗಳನ್ನು ಸೂಕ್ತ ಸಮಯದಲ್ಲಿ ತೆಗೆದುಕೊಳ್ಳುವುದು.

ಕಾಯಿಲೆಗೆ ತುತ್ತಾದ ನಂತರ ತಕ್ಷಣವೇ ಅಗತ್ಯವಿರುವ ಮನೆಮದ್ದುಗಳನ್ನೋ, ಅದರಿಂದ ಉಪಶಮನ ದೊರೆಯದ ಸಂದರ್ಭದಲ್ಲಿ ತಜ್ಞವೈದ್ಯರ ಸಲಹೆ ಸೂಚನೆಯಂತೆ ಚಿಕಿತ್ಸೆಯನ್ನು ಪಡೆಯುವುದು ತುಂಬಾ ಮುಖ್ಯ. ಯಾವುದೇ ತೀವ್ರ ರೋಗಗಳನ್ನು ಪತ್ತೆ ಹಚ್ಚಿದಾಗ ಸಮಯಕ್ಕೆ ಸರಿಯಾಗಿ ಪ್ರಾರಂಭಿಸುವ ಚಿಕಿತ್ಸೆ ಹೆಚ್ಚು ಪರಿಣಾಮಕಾರಿ. ಚಿಕಿತ್ಸೆ ಸಂದರ್ಭದಲ್ಲಿ ಸರಿಯಾದ ಆಹಾರ ಉಪಚಾರಗಳು, ಪಥ್ಯಾಹಾರಗಳೂ ರೋಗವನ್ನು ಗುಣಪಡಿಸಲು ಅಷ್ಟೇ ಪ್ರಮುಖ ಪಾತ್ರ ವಹಿಸುತ್ತದೆ.

ಹೀಗೆ ಸರಿಯಾದ ದಿನಚರಿಯ ಪಾಲನೆ, ಉತ್ತಮ ಆಹಾರ ಸೇವನೆ, ವ್ಯಾಯಾಮ, ಯೋಗ ಪ್ರಾಣಾಯಾಮಗಳ ಅಭ್ಯಾಸದಿಂದ ದೈಹಿಕ – ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ಈ ನಿಟ್ಟಿನಲ್ಲಿ ರೋಟರಿ ಸಂಸ್ಥೆಯು ಮಕ್ಕಳಿಗೆ ಪ್ರೋಟೀನ್ ಪೌಡರ್ ವಿತರಣೆ, ಪೋಲಿಯೋ ಲಸಿಕೆ, ಆರೋಗ್ಯ ಮಾಹಿತಿ, ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮಾಜಕ್ಕೆ ನೀಡುತ್ತಿರುವ ಕೊಡುಗೆ ಅಭಿನಂದನಾರ್ಹ. ಡಿಸೆಂಬರ್ ತಿಂಗಳನ್ನು ರೋಟರಿಯ Disease prevention and treatment ತಿಂಗಳಾಗಿ ಆಚರಿಸುತ್ತಿರುವುದು ನಿಜಕ್ಕೂ ಅರ್ಥಪೂರ್ಣ. – **ರೊ. ಡಾ. ಅನುಲೇಖ ಬಾಯರಿ.**

---

## ವಾರದ ಸಭೆಯ ವರದಿ











ತಾರೀಕು 28–11–2024ರಂದು ನಮ್ಮ ವಾರದ ಸಭೆಯು ಹೋಟೆಲ್ ಶಿವಪ್ರಸಾದ್ ಗ್ರ್ಯಾಂಡ್‌ನ ಸಭಾಂಗಣದಲ್ಲಿ ನಡೆಸಲಾಯಿತು. Dist. Gov. PHF Rtn. ದೇವ್ ಆನಂದ್‌ರವರು ತಾ. 12–12–2024ರಂದು ನಮ್ಮ ಕ್ಲಬ್ಬಿಗೆ ತಮ್ಮ ಅಧಿಕೃತ ಭೇಟಿಯನ್ನು ನೀಡುವ ದಿನಾಂಕವನ್ನು ಖಚಿತ ಪಡಿಸಿರುವುದರಿಂದ, ಅಂದು ನಡೆಸಲು ಉದ್ದೇಶಿಸಿರುವ ಇಡೀ ದಿನದ ಕಾರ್ಯಕ್ರಮಗಳು ಹಾಗೂ ಸಂಜೆ ನಡೆಸುವ ಸಾರ್ವಜನಿಕ ಸಭೆಯ ಬಗ್ಗೆ ಪೂರ್ವ ತಯಾರಿಯನ್ನು ನಡೆಸಲು ಅಂದಿನ ಸಭೆಯನ್ನು ಆಯೋಜಿಸಲಾಗಿತ್ತು. ರೊ. ಶ್ರೀನಿವಾಸ ಶೇಟ್‌ರವರ ಪ್ರಾರ್ಥನೆಯೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು. ಹಂಗಾಮಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ ರೊ. ಸುರೇಖಾ ಪುರಾಣಿಕರು ಕಳೆದ ವಾರದ ವರದಿಯನ್ನು ಸಭೆಗೆ ನೀಡಿದರು. ವಾರದ ಚಿಂತನೆಯನ್ನು ನೀಡಿದ ರೊ. ಸತ್ಯನಾರಾಯಣ ಪುರಾಣಿಕ್‌ರವರು ನಾವೆಷ್ಟೇ ಜಂಜಾಟದಲ್ಲಿದ್ದರೂ ಕೂಡಾ ನಮ್ಮ ಹಿಂದಿನ ದಿನಗಳನ್ನು ಅವಲೋಕಿಸದಿದ್ದಲ್ಲಿ ನಾವು ಹಿಂದೆ ಮಾಡಿದ ತಪ್ಪುಗಳನ್ನು ಮುಂದೆ ಕೂಡಾ ಸರಿಪಡಿಸಲು ಅಸಾಧ್ಯವಾಗುತ್ತದೆ." ಎಂದು ನೆನಪಿಸಿದರು. ರೋಟರಿ ಮಾಹಿತಿ ನೀಡಿದ ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರು "ಮುಂಬಯಿಯ ಪಿಡಿಜಿ ದೀಪಕ್ ಶಿಕಾರ್‌ಪುರರವರು ಒಬ್ಬ ಸಾಮಾನ್ಯ ರೋಟೇರಿಯನ್ ಆಗಿ ಒಂದು ಕ್ಲಬ್ಬಿನಲ್ಲಿದ್ದರೂ, ಕೆಲಸದ ಒತ್ತಡದಿಂದಾಗಿ ರೋಟರಿಗೆ ರಾಜೀನಾಮೆಯನ್ನು

ನೀಡುವಂತಹ ಸಂದರ್ಭ ಬಂದಾಗ ಅಚಾನಕ್ ಆಗಿ ಬೇರೊಂದು ರೋಟರಿ ಸಭೆಯಲ್ಲಿ ಭಾರತದ ಹೆಮ್ಮೆಯ ಪುತ್ರರಾದ ಶ್ರೀ ರತನ್ ಟಾಟಾರವರು ಸಿಕ್ಕಿ, ಅವರಿಂದ ಪಡೆದ ಪ್ರೇರಣೆಯಿಂದಾಗಿ ಮುಂದೆ ತಾನು ರೋಟರಿಯಲ್ಲಿ ಉಳಿದು ನಂತರ Dist. Gov. ಆಗಿ ಬೆಳೆದ ಬಗೆ ನಮಗೆ ಕೂಡಾ ಸ್ಫೂರ್ತಿಯಾಗಿರುತ್ತದೆ" ಎಂದು ತಿಳಿಸಿದರು. ನಂತರ ಮಾತನಾಡಿದ ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ತಾ. 12–12–2024ರಂದು ನಡೆಯಲಿರುವ Dist. Gov. PHF Rtn. ದೇವ್ ಆನಂದ್‌ರವರ ಅಧೀಕೃತ ಭೇಟಿಯ ದಿನದಂದು ನಡೆಸಲಿರುವ ಸರಣಿ ಕಾರ್ಯಕ್ರಮಗಳ ಬಗ್ಗೆ ಮತ್ತು ಸಂಜೆ ನಡೆಸಲಿರುವ ಸಾರ್ವಜನಿಕ ಸಭೆಯ ಬಗ್ಗೆ 21–11–2024ರಂದು Board Meetingನಲ್ಲಿ ನಡೆಸಿದ ಸಂವಹನ, ಸದಸ್ಯರ ಅಭಿಪ್ರಾಯಗಳು ಮತ್ತು ನಿರ್ಣಯಗಳನ್ನು ಸಭೆಗೆ ತಿಳಿಸಿ ಪುನಹ ಅಂದಿನ ಸಭೆಯ ಸದಸ್ಯರ ಸಲಹೆಗಳನ್ನು ಆಲಿಸಿದರು. ಬೆಳಿಗ್ಗೆ 11 ಗಂಟೆಗೆ Dits. Governorರವರನ್ನು ಸ್ವಾಗತಿಸಲು ಮತ್ತು ಸಂಜೆ 4 ಗಂಟೆಗೆ ನಡೆಯುವ ಕ್ಲಬ್ ಅಸೆಂಬ್ಲಿಗೆ ಎಲ್ಲಾ ಸದಸ್ಯರೂ ತಪ್ಪದೇ ಹಾಜರಾಗಬೇಕೆಂದು ಹಾಗೂ ಸಂಜೆ 7.00 ಗಂಟೆಗೆ ನಡೆಯುವ ಸಾರ್ವಜನಿಕ ಸಭೆಗೆ ಎಲ್ಲಾ ಸದಸ್ಯರೂ ಕುಟುಂಬ ಸಮೇತರಾಗಿ ಹಾಜರಾಗಿ ಸಮಾರಂಭವನ್ನು ಯಶಸ್ವಿಗೊಳಿಸಬೇಕಾಗಿ ಕೋರಿಕೊಂಡರು. ರೊ. ಜೆರಾಲ್ಡ್ ಕ್ರಾಸ್ತಾರವರು ನಗೆಹನಿಯನ್ನು ಸಿಡಿಸಿದರು. ರೊ. ಜಾನ್ಸನ್ ಅಲ್ಮೇಡಾರವರು ಧನ್ಯವಾದವನ್ನು ನೀಡಿದ ಮೇಲೆ ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಸಮಾಪ್ತಿಗೊಳಿಸಲಾಯಿತು.




ಭಂಡಾರ್‌ಕಾರ್ಸ್ ಕಲಾ ಹಾಗೂ ವಿಜ್ಞಾನ ಕಾಲೇಜು ಕುಂದಾಪುರ ಹಾಗೂ ಉಡುಪಿ ಜಿಲ್ಲಾಡಳಿತದ ಸಹಯೋಗದೊಂದಿಗೆ ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ 2–12–24 ರಿಂದ 5–12–24 ರ ವರೆಗೆ ನಡೆಯುವ ಬೃಹತ್ ವಿಜ್ಞಾನ, ವಾಣಿಜ್ಯ, ಕಲೆ,ಪರಿಸರ, ಸಾಮಾನ್ಯಜ್ಞಾನ ಹಾಗೂ ಶೈಕ್ಷಣಿಕ ವಸ್ತು ಪ್ರದರ್ಶನದ ಪುರ ಮೆರವಣಿಗೆಯಲ್ಲಿ ನಮ್ಮ ಕ್ಲಬ್ ನ ಅಧ್ಯಕ್ಷೆ ರೊ ಜ್ಯುಡಿತ್ ಮೆಂಡೋನ್ಸ ಹಾಗೂ ಸದಸ್ಯರು ಭಾಗವಹಿಸಿ ಶುಭಕೋರಿದರು.




## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ತಾ.09–12–2024ನೇ ಸೋಮವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ಸುಪ್ರೀತ್ ಚಾತ್ರ ಮತ್ತು ಆ್ಯನ್ ಶ್ವೇತಾರವರಿಗೆ ಕ್ಲಬ್ಬಿನ ಸದಸ್ಯರ ಪರವಾಗಿ ಶುಭಾಶಯಗಳು. ಮೊಬೈಲ್ : 9611123935




ತಾ.10–12–2024ನೇ ಮಂಗಳವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ರೊ. ಪ್ರಮೋದ್ ರಾವ್ ಮತ್ತು ಆ್ಯನ್ ಅಶ್ವಿನಿ ರಾವ್‌ರವರಿಗೆ ಕ್ಲಬ್ಬಿನ ಸದಸ್ಯರ ಪರವಾಗಿ ಶುಭಾಶಯಗಳು. ಮೊಬೈಲ್ : 9844613019

## ಹುಟ್ಟುಹಬ್ಬದ ಶುಭಾಶಯಗಳು



ಪಿಡಿಜಿ. ರೊ. ಅಭಿನಂದನ್ ಶೆಟ್ಟಿ
ದಿನಾಂಕ : ಡಿಸೆಂಬರ್ 12
ಮೊಬೈಲ್ : 98440 65100



Rtn. Dr. S. N. Padiyar
1985-86 & 1986-87


Rtn. B. Arun Kumar Shetty
1987-88


Rtn. Dr. H. Rammohan
1988-89


Rtn. K. Shridhar Kamath
1989-90


Rtn. Dr. Anand Nayak
1990-91


Rtn. B. Ramachandra Prabhu
1991-92


Rtn. G. Santhosh Kumar Shetty
1992-93


Rtn. Dr. H. A. Vishweshwar
1993-94


Rtn. Dr. H. R. Hebbar
1994-95



Rtn. K. T. Surendranath
1995-96


Rtn. B. C. Somayaji
1997-98


Rtn. S. Subraya Halambi
1999-2000


Rtn. K. Seetharama Nackathaya
2001-02


Rtn. Dr. Umesh Puthran
2003-04


Rtn. A. Shantharam Pai
2005-06


Rtn. S. Sadananda Chatra
1996-97


Rtn. K. Suresh Kamath
1998-99


Rtn. S. Vijaya Shetty
2000-01


Rtn. U. S. Shenoy
2002-03


Rtn. Dr. B. V. Udupa
2004-05


Rtn. K. Shantharam Prabhu
2006-07

## Rotary Information

ದಿ ರೋಟರಿ ನ್ಯೂಸ್, ಮಾಸಿಕ ಪತ್ರಿಕೆಯಲ್ಲಿ ಪ್ರಕಟವಾದ ದಿವಂಗತ ರತನ್ ಟಾಟಾ ಅವರ ಕುರಿತ ಅಗ್ರ ಲೇಖನದ ಒಂದು ಭಾಗವನ್ನು ಇಲ್ಲಿ ಹಂಚಿಕೊಳ್ಳುತ್ತಿದ್ದೇನೆ.

ಟಾಟಾ ಸಮೂಹದ ಒಂದು ಕಂಪನಿಯಾದ ಟೆಲ್ಕೋ ಇದರ ಯುವ ಸೇಲ್ಸ್ ಮ್ಯಾನ್ ಒಬ್ಬರು ಮುಂಬೈಯಲ್ಲಿನ ಒಂದು ರೋಟರಿ ಕ್ಲಬ್ ಅನ್ನು ಸೇರಿಕೊಳ್ಳುತ್ತಾರೆ ಆದರೆ ಕೆಲಸದ ಒತ್ತಡದಲ್ಲಿ ಅವರಿಗೆ ಮೀಟಿಂಗ್ ನಲ್ಲಿ ಭಾಗವಹಿಸಲು ಸಾಧ್ಯವಾಗದೆ ಅವರ ಹಾಜರಾತಿ ಕಮ್ಮಿ ಆಗಿರುತ್ತದೆ.ಇದರಿಂದ ಬೇಸತ್ತ ಅವರು ರೋಟರಿ ಕ್ಲಬ್ ಅನ್ನು ತ್ಯಜಿಸುವ ಬಗ್ಗೆ ಆಲೋಚಿಸಿ ತನ್ನ ರಾಜೀನಾಮೆ ಪತ್ರವನ್ನು ಬರೆದಿಡುತ್ತಾರೆ. ಅದೇ ಸಂದರ್ಭದಲ್ಲಿ ಮುಂಬಯಿ ಹೋಟೆಲ್ ತಾಜ್ ಮಹಲ್ ನಲ್ಲಿ ನಡೆಯುತ್ತಿದ್ದ ಕಂಪ್ಯೂಟರ್ ಸಮ್ಮೇಳನದಲ್ಲಿ ಭಾಗವಹಿಸಲು ಆಗಮಿಸಿದಾಗ ಅಲ್ಲಿ ಮುಂಬೈ ರೋಟರಿ ಕ್ಲಬ್ಬಿನ ಮೀಟಿಂಗ್ ನಡೆಯುತ್ತಿರುವುದು ತಿಳಿದು ಇದು ನನ್ನ ರೋಟರಿ ಜೀವನದ ಕೊನೆಯ ಸಭೆ ಎಂದೆನಿಸಿಕೊಂಡು ಆ ಮೀಟಿಂಗ್‌ನಲ್ಲಿ ಭಾಗವಹಿಸುತ್ತಾರೆ.

ಆ ಸಭೆಯಲ್ಲಿ ರತನ್ ರತನ್ ಟಾಟಾ ರವರ ಉಪಸ್ಥಿತಿಯನ್ನು ಕಂಡು ಆಶ್ಚರ್ಯ ಚಕಿತರಾಗಿ ಅವರನ್ನು ಭೇಟಿಯಾಗಿ ತನ್ನನ್ನು ಪರಿಚಯಿಸಿಕೊಂಡು ಟಾಟಾ ಮೋಟಾರ್ಸ್ ನಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ ಎನ್ನುವುದನ್ನು ತಿಳಿಸಿದರು. ಟಾಟಾರವರು ಆ ಯುವಕನ ಉದ್ಯೋಗದ ಬಗ್ಗೆ ವಿಚಾರಿಸಿಕೊಂಡು. ನೀನು ವಾಹನ ಮಾರಾಟ ಕ್ಷೇತ್ರದಲ್ಲಿ ಇದ್ದು ಹೆಚ್ಚಿನ ಜನರ ಸಂಪರ್ಕದಲ್ಲಿರುವುದರಿಂದ Rotary is a good place for you ಎನ್ನುತ್ತಾರೆ.

ಈ ಸಂವಹನ ನನ್ನ ಜೀವನದಲ್ಲಿ ಬದಲಾವಣೆ ತಂದಿತು. ಈ ಮೀಟಿಂಗ್ ನ ತರುವಾಯ ನನ್ನ ರಾಜಿನಾಮೆ ಪತ್ರವನ್ನು ಹರಿದುಹಾಕಿದೆ ಮತ್ತು ಒರ್ವ ಹೆಮ್ಮೆಯ ರೋಟೆರಿಯನ್ನಾಗಿ ಮುಂದುವರಿದೆ ಎನ್ನುವುದನ್ನು ಹಂಚಿಕೊಂಡಿದ್ದಾರೆ ಪಿಡಿಜಿ ದೀಪಕ್ ಶಿಕಾರ್ ಪುರ್ ರೋಟರಿ ಜಿಲ್ಲೆ 3131.

**by Rtn. Dr. Uttam Kumar Shetty**

### ಕಳೆದ ವಾರದ ಚಿಂತನೆ

**Only dead fish go with the stream....**

ಪ್ರವಾಹದ ದಿಕ್ಕಿನಲ್ಲಿ ಸತ್ತ ಮೀನುಗಳು ಮಾತ್ರ ಸಾಗುತ್ತವೆ.
ಜೀವಂತವಿರುವ ನಾವು ನಮ್ಮ ಆಲೋಚನಾ ಶಕ್ತಿಯಿಂದ ಯಾವುದು ಸರಿ ಎಂದು ತಿಳಿದು ಉತ್ತಮ ಮಾರ್ಗದಲ್ಲಿ ನಡೆಯಬೇಕು.
ಜೀವನದ ಜಂಜಾಟದ ಓಟದಲ್ಲಿ ಓಡುವುದನ್ನು ನಿಲ್ಲಿಸಿ,
ಹಿಂತಿರುಗಿ ನೋಡಿ, ಸರಿಯಾದ ಮಾರ್ಗದಲ್ಲಿದ್ದೇವಾ
ಎಂದು ಆಗಾಗ ಪರೀಕ್ಷಿಸಿಕೊಳ್ಳಬೇಕು.

ನೀಡಿದವರು : ರೊ. ಸತ್ಯನಾರಾಯಣ ಪುರಾಣಿಕ

**ಯಾವ ವಿಚಾರವಾದರೂ ಸರಿ, ಚೆನ್ನಾಗಿ ನೋಡಿ,**
**ಕೇಳಿ ಅಮೇಲೆ ಮಾತಾಡಿ.**
**ಕಣ್ಣೆರಡು, ಕಿವಿಯೆರಡು ಒಂದೇ ಬಾಯಿ ಇರೋದು ಅದಕ್ಕೇ.!**

### The 4 Way Test
*of the things we think, say or do*

1. Is it the TRUTH?
2. Is it FAIR to all concerned?
3. Will it build GOODWILL and BETTER FRIENDSHIPS?
4. Will it be BENEFICIAL to all concerned?

Email id – rotaryclub.kundapurasouth@gmail.com


Rtn. T. Raghavendra Hatwar
2007-08



Rtn. K. Shankar
2008-09


Rtn. S. Jayakar Shetty
2009-10


Rtn. K. K. Kanchan
2010-11


Rtn. Abhinandan A. Shetty
2011-12


Rtn. Vivian Crasto
2012-13


Rtn. G. Shreedhar Shetty
2013-14


Rtn. K. P. Bhat
2014-15



Rtn. P. Vasudeva Karanth
2015-16


Rtn. Aouzline F. Rebello
2016-17



Rtn. J. Srinath Rao
2017-18


Rtn. Johnson D' Almeida
2018-19


Rtn.Devaraj
2019-20


Rtn. Dr. Uttam Kumar Shetty
2020-21


Rtn.Mahendr Shetty
2021-22


Rtn.Sathyanarayana Puranik
2022-23


Rtn.Suresh Mallya
2023-24

*This Bulletin is sponsored by :*
Rtn. Prakash Shetty
Mob. :

For Private Circulation only